ಕಟ್ಟಿಸಿಕೊಂಡು ಅಸಹಾಯಕಳಂತೆ ಹಾಸಿಗೆಯಲ್ಲಿ ಮಲಗಿದ್ದ ಸತ್ಯನ ಮಗಳ ಪರಿಸ್ಥಿತಿ. ವಿಪರ್ಯಾಸ ಅಂದರೆ ಎಲ್ಲರಿಗಿಂತ ಹೆಚ್ಚು ಪೆಟ್ಟು ಬಿದ್ದಿರುವುದು ಅವಳಿಗೇ. ಸರಿಯಾಗುತ್ತದೆಯೇ ಕಾಲು? ಅಥವಾ ಏನಾದರೂ ಐಬು ಉಳಿದುಕೊಳ್ಳುತ್ತದೆಯೋ? ಅಂಗವೈಕಲ್ಯದ ಹಣೆಪಟ್ಟಿ? ಎಲ್ಲಾ ಸರಿಯಾಗಲು ಅದಿನ್ನೆಷ್ಟು ಕಾಲ ಬೇಕಾಗುತ್ತದೆಯೋ? ಈಗ ಗೊತ್ತಾಗಿರುವ ವರಮಹಾಶಯ ಅಲ್ಲಿಯವರೆಗೆ ಕಾಯುತ್ತಾನೆಯೇ? ಅವನ ಮನೆಯವರು ಒಪ್ಪುತ್ತಾರೆಯೇ? ಅಥವಾ ಅಪಶಕುನದ ಹಣೆಪಟ್ಟಿ ಹಚ್ಚಿ ರಾಘವ ಗೆಳೆಯನ ಕಡೆ ಮರುಕದ ದೃಷ್ಟಿಹರಿಸಿದರೆ ಅವನು ಹೇಳುತ್ತಿದ್ದಾನೆ–

'ದೇವರು ದೊಡ್ಡೋನು ಕಣೋ, ಇಷ್ಟಲ್ಲೇ ಮುಗೀತು. ಯಾರ ಜೀವಕ್ಕೆ ಅಪಾಯ ಆಗಿದ್ರೂ ಹೇಗೆ ತಡ್ಕೋಬೇಕಿತ್ತು?' ಅದೆಂತಾ ದೇವರಪ್ಪಾ, ಇಷ್ಟನ್ನಾದರೂ ಯಾಕೆ ಮಾಡಿಸಬೇಕಿತ್ತು ಅನಿಸದೆ ಇರಲಿಲ್ಲ ರಾಘವನಿಗೆ. ಅನಿಸಿದ್ದನ್ನೆಲ್ಲಾ ಆಡಿ ತೋರಿಸಲು ಸಾಧ್ಯವೇ? ಮುಂದೇನು? ಹುಡುಗನ ಪೈಕಿಯವರು ಯಾರಾದರೂ ಭೇಟಿಗೆ ಬಂದಿದ್ದರಾ? ವಿಚಾರಿಸಿಕೊಂಡರಾ?' ಎನ್ನುವ ಪ್ರಶ್ನೆ ಗಂಟಲು ಒತ್ತುತ್ತಿದೆ. ಅದೂ ಕೇಳಲು ಸಾಧ್ಯವಿಲ್ಲದ್ದು. ಇವನ ಒಳತೋಟಿಯನ್ನು ಅರ್ಥ ಮಾಡಿಕೊಂಡವನಂತೆ, ಅಥವಾ ಬೇರೆ ಯಾರ್ಯಾರಿಂದಲೋ ಈ ಪ್ರಶ್ನೆಗಳನ್ನು ಎದುರಿಸಿದ್ದರಿಂದಲೂ ಇರಬಹುದು, ತಾನಾಗಿ ಹೇಳಿಕೊಂಡಿದ್ದ ಸ್ನೇಹಿತ 'ಮುಂದಿನ ಕ್ಷಣ ಏನಾಗುತ್ತೆ ಅನ್ನೋದೇ ನಮಗೆ ಗೊತ್ತಿರಲ್ಲ ಕಣೋ. ಅಂತಾದ್ದರಲ್ಲಿ ಅದರ ಬಗ್ಗೆ ಯಾಕೆ ಯೋಚನೆ ಮಾಡಿ ತಲೆ ಕೆಡಿಸ್ಕೋಬೇಕು? ಮದುವೆಗೆ ಇಟ್ಟ ಮುಹೂರ್ತಕ್ಕೆ ಇನ್ನೂ ಮೂರು ತಿಂಗಳು ಬಾಕಿ ಉಂಟು. ಇವಳ ಹಣೇಲಿ ಅವನನ್ನೇ ಮದುವೆಯಾಗಬೇಕು ಅಂತ ಬರೆದಿದ್ರೆ ಯಾರಿಂದ್ಲೂ ತಪ್ಪಿಸೋಕೆ ಸಾಧ್ಯ ಇಲ್ಲ. ಹಾಗಿಲ್ಲ ಅಂದ್ರೆ ನಮ್ಮ ಕೈಲಿ ಏನೂ ಇಲ್ಲ. ಆಗೋದೆಲ್ಲಾ ಒಳ್ಳೇದಕ್ಕೇ ಅಂತ ನಂಬ್ಕೊಂಡು ಸಮಾಧಾನವಾಗಿರೋದು'.

'ಛೇ ಛೇ, ಕೆಟ್ಟದ್ದು ಯೋಚಿಸ್ಬೇಡ. ದೇವರು ಒಳ್ಳೆಯೋರಿಗೆ ಒಳ್ಳೇದನ್ನೇ ಮಾಡ್ತಾನೆ...' ಒಂದು ಸವಕಲು ಸಮಾಧಾನದ ಮಾತು.

'ಏನ್ಮಾಡ್ತಾನೋ ಅವನಿಗೇ ಗೊತ್ತು. ನಾವಂತೂ ಯಾವುದಕ್ಕೂ ರೆಡಿಯಾಗಿದೀವಿ. ದೇವರ ಮೇಲೆ ಭಾರ ಹಾಕಿದೀವಿ'.

'ಅಷ್ಟೇ, ಅಷ್ಟೇ. ನನ್ನಿಂದ ಯಾವ ಸಹಾಯ ಬೇಕಾದ್ರೂ, ಎಷ್ಟು ಹೊತ್ತಿಗೆ ಬೇಕಾದ್ರೂ ಯಾವ ಸಂಕೋಚಾನೂ ಇಟ್ಕೊಳ್ದೆ ಕೇಳು ಮಾರಾಯಾ. ಅರ್ಜೆಂಟಿಗೆ ದುಡ್ಡೇನಾದ್ರೂ ಬೇಕಾ ಹೇಳು...'

'ಇಷ್ಟು ಬೆಂಬಲ ಕೊಡ್ತಿದೀಯಲ್ಲ, ಸಾಕು' ಕೈ ಮುಗಿದಿದ್ದ ಒಡೆದ ಗಾಜಿನ ಚೂರುಗಳಿಂದ ಮೈಕೈ ಎಲ್ಲಾ ಜಖಂ ಆಗಿ ಪಟ್ಟಿ ಸುತ್ತಿಸಿಕೊಂಡಿದ್ದ ಸತ್ಯ. ಸತ್ಯನ ಮಗಳು ಮಲಗಿದ್ದ ಮಂಚದ ಬಳಿ ಸ್ವಲ್ಪ ಹೆಚ್ಚೇ ಹೊತ್ತು ನಿಂತಿದ್ದ ರಾಘವ, ಹನಿಗೂಡಿದ ಕಣ್ಣುಗಳಿಂದ. 'ಬೇಗ ಚೇತರಿಸ್ಕೋ ಕಂದಾ...' ಅವಳ ಕೈ ಹಿಡಿದು ಹಾರೈಸಿದ್ದ ಹೃತ್ಪೂರ್ವಕವಾಗಿ.


'ದೇವ್ರಿದಾನೆ ಅಂಕಲ್, ನೋಡ್ಕೋತಾನೆ' ಅಂದಿದ್ದಳು ಅಪ್ಪನ ಮಗಳು.

***

ಸರಿಸುಮಾರು ಈ ಘಟನೆಯ ಬೆನ್ನಲ್ಲೇ ಮತ್ತೊಂದು ಕಹಿಘಟನೆ ಸಂಭವಿಸಿದ್ದು. ರಾಘವನ ಗೆಳೆಯರ ಪಟ್ಟಿಯಲ್ಲಿದ್ದ, ಸಹೋದ್ಯೋಗಿಯೂ ಆಗಿದ್ದ ವಿಶ್ವ ಪುಕ್ಕಲು ಸ್ವಭಾವದವನು. ಅವನ ಅಣ್ಣ ನಡುವಯಸ್ಸಲ್ಲಿ ಹೃದಯಾಘಾತ ಆಗಿ ತೀರಿಕೊಂಡ ಮೇಲೆ ಅವನ ಆಳ ಮನಸ್ಸಿನಲ್ಲೊಂದು ಭೀತಿ ಒಳ ಹೊಕ್ಕು ಕೂತು ಬಿಟ್ಟಿತ್ತು. ಆರೋಗ್ಯದ ವಿಷಯದಲ್ಲಿ ಅವನು ಎಷ್ಟು ಕಾಳಜಿ ತೆಗೆದುಕೊಳ್ಳುತ್ತಿದ್ದ ಅಂದರೆ ಸಕ್ಕರೆ ಹಾಕಿದ ಸಿಹಿ ತಿನಿಸುಗಳಿರಲಿ, ಸಕ್ಕರೆ ಹಾಕಿದ ಕಾಫಿಯೂ ವರ್ಜ್ಯ. ಉಪ್ಪು, ಎಣ್ಣೆಗಳ ಬಳಕೆಯಲ್ಲಿ ಮಿತ. ಬೆಳಿಗ್ಗೆ ಐದು ಗಂಟೆಗೆ ಎದ್ದು ವಾಕಿಂಗ್ ಹೋಗುವ ಅಭ್ಯಾಸ ರೂಢಿಸಿಕೊಂಡಿದ್ದ.

'ಇಷ್ಟೆಲ್ಲಾ ಕಷ್ಟಪಟ್ಕೊಂಡು, ನಾಲಿಗೆ ಹಿಡಿತದಲ್ಲಿಟ್ಕೊಂಡು ಯಾಕೆ ಬದುಕ್ಬೇಕಪ್ಪಾ? ಇರುವಷ್ಟು ದಿನ ತಿಂದ್ಕೊಂಡು, ಉಡ್ಕೊಂಡು ಹಾಯಾಗಿರೋದು...' ರಾಘವನಂಥ ಆತ್ಮೀಯ ವಲಯಕ್ಕೆ ಸೇರಿದವರು ಅವನಿಗೆ ಕೀಟಲೆ ಮಾಡುತ್ತಿದ್ದರು.

'ಜವಾಬ್ದಾರಿ ಅನ್ನೋದೊಂದು ಇರುತ್ತಲ್ರೋ. ಅದನ್ನ ಪೂರ್ತಿ ಮಾಡೋಕೆ ಮುಂಚೆ ಟಿಕೆಟ್ ತಗೊಂಡ್ರೆ ನಮ್ಮನ್ನೇ ನಂಬಿದೋರ ಗತಿ ಏನು?' ವಿಶ್ವ ಗಂಭೀರವಾಗಿ ಉತ್ತರಿಸುತ್ತಿದ್ದ. ಅವನ ಕಾಳಜಿಗೂ ಸಕಾರಣ ಇತ್ತು. ಅಣ್ಣ ತೀರಿಕೊಂಡಿದ್ದು ನಿಮಿತ್ತವಾಗಿ ಅತ್ತಿಗೆ ಮಗಳ ಸಮೇತ ತೌರು ಸೇರಿಕೊಂಡಿದ್ದಳು. ಆಸ್ತಿಯಲ್ಲಿ ಪಾಲಿನ ಬದಲು ಅದಕ್ಕೆ ಸರಿಸಮನಾದ ಹಣ ಅವಳಿಗೆ ಸಂದಾಯವಾಗಿತ್ತು. ಮತ್ತು ಹೀಗೆ ಸಂದಾಯ ಮಾಡುವ ಹೊಣೆ ವಿಶ್ವನ ತಲೆಯ ಮೇಲೆ ಬಿದ್ದಿತ್ತು. ಆಸ್ತಿ ಮಾರಲು ಅಪ್ಪನಿಗೆ ಅರೆ ಮನಸು. ಬಂಗಾರದಂತಾ ಜಮೀನನ್ನು ಪರಭಾರೆ ಮಾಡಲು ವಿಶ್ವನಿಗೂ ಮನಸ್ಸಿಲ್ಲ. ನಿವೃತ್ತಿಯ ನಂತರ ಅಲ್ಲೇ ಹೋಗಿ ನೆಲೆಸಬೇಕೆಂದು ಐವತ್ತರ ಈ ವಯಸ್ಸಿನಲ್ಲಾಗಲೇ ಅವನು ಲೆಕ್ಕಾಚಾರ ಹಾಕಿಕೊಂಡಾಗಿತ್ತು. ಅಲ್ಲಿಯವರೆಗೆ ತಿಂಗಳೆರಡು ತಿಂಗಳಿಗೊಮ್ಮೆ ಹಳ್ಳಿಗೆ ಹೋಗಿ ಅಪ್ಪ, ಅಮ್ಮನ ಬೇಕು ಬೇಡಗಳನ್ನು ಗಮನಿಸಿ ಬರುವ ಹೊಣೆಗಾರಿಕೆ.



ಉಸಿರೆಂಬೋದು
ಉಸಿರಾಡುವುದಷ್ಟೇ ಅಲ್ಲ
ಬದುಕುವುದೂ ಆಗಿದೆ
ನಾನಿಲ್ಲಿ
ಇವುಗಳ ಮಧ್ಯೆ
ಸಿಕ್ಕಿ ಬಿಟ್ಟಿದ್ದೇನೆ!

–ಅವಿಜ್ಞಾನಿ, ಮಂಗಳೂರು

ಮದುವೆ ಮುಂಜಿಗಳಂತಾ ಕಾರ್ಯಕ್ರಮಗಳಿಗೆ ಆಪ್ತರು ಕರೆದರೆ ಹಾಜರಿ ಹಾಕಿ ಬರುವುದಕ್ಕಷ್ಟೇ ತನ್ನನ್ನು ಸೀಮಿತಗೊಳಿಸಿಕೊಂಡಿದ್ದ ವಿಶ್ವ. ಸಮಾರಂಭಗಳ ಊಟ ಅವನ ಆರೋಗ್ಯಪ್ರಜ್ಞೆಗೆ ವ್ಯತಿರಿಕ್ತ.

'ನಾಲಿಗೆ ಬಯಸಿದ್ದನ್ನು ತಿನ್ಬೇಕು ಅನಿಸಲ್ವೇನೋ ನಿಂಗೆ? ಒಳ್ಳೇ ಪುರಾಣಕಾಲದ ಋಷಿ ಮುನಿಗಳ ಹಾಗೆ ಗೆಡ್ಡೆಗೆಣಸಲ್ಲಿ ಬೇಕಾದ್ರೂ ಬದುಕ್ತೀಯಪ್ಪಾ. ಬೀದಿ ಬದಿಯ ಪಾನೀಪೂರಿಯ ರುಚಿ ಮರೆತೇ ಹೋಗಿರ್ಬೇಕು ನಿಂಗೆ...' ಯಾರೇ ಕೆಣಕಿದರೂ ಅವನ ರುಚಿಮೊಗ್ಗುಗಳು ಕೆರಳುತ್ತಿರಲಿಲ್ಲ. ಒಂಥರಾ ಸ್ಥಿತಪ್ರಜ್ಞನ ಹಾಗೆ ನಗುತ್ತಿದ್ದ. 'ನನ್ನ ಕಷ್ಟ ನಿಮಗೆ ಅರ್ಥವಾಗಲ್ಲ ಬಿಡ್ರೋ...' ಅನ್ನುತ್ತಿದ್ದ.

ಹೌದು, ಕಷ್ಟ ಇತ್ತು ವಿಶ್ವನಿಗೆ. ವಯೋಸಹಜ ಕಾಯಿಲೆಯಿದ್ದ ಹೆತ್ತವರನ್ನು ಆಗೀಗ ಸಿಟಿಗೆ ಕರೆ ತಂದು ತಪಾಸಣೆ ಮಾಡಿಸಿ, ಔಷಧಿ ಖರೀದಿಸಿ ಕಳಿಸಿ ಕೊಡಬೇಕಾದ ಹೊಣೆಗಾರಿಕೆ. ಅವರನ್ನು ಇಲ್ಲೇ ಉಳಿಸಿಕೊಂಡರೆ ಅಲ್ಲಿ ಜಮೀನು ಬೀಕಾಬಿಟ್ಟಿ ಆದೀತೆಂಬ ವಾಸ್ತವಪ್ರಜ್ಞೆ. ಅವರಿಗೆ ಇಲ್ಲಿನ ವಾತಾವರಣ ಹಿಡಿಸುವುದಿಲ್ಲವೆಂಬ ಸಮರ್ಥನೆ. ಎಷ್ಟೇ ನಿಗಾ ವಹಿಸಿದರೂ ತಾನು ಎಲ್ಲೋ ತಪ್ಪಿ ಬಿದ್ದಿದ್ದೇನೆಂಬ ವೃಥಾ ಹಳಹಳಿಕೆ.

'ಮಾರಾಯಾ, ಚಿಂತೆ ಮಾಡೋಕೇ ಹುಟ್ಟಿದೀನಿ ಅನ್ನೋ ಹಾಗೆ ಆಡ್ಬೇಡ್ವೋ. ಕಷ್ಟ ಯಾರಿಗೆ ಇರಲ್ಲ? ಸಂಸಾರ ಅಂದ್ಮೇಲೆ ಒಂದಲ್ಲಾ ಒಂದು ತಾಪತ್ರಯ ಇದ್ದಿದ್ದೇ. ಅದನ್ನ ಕೈಲಾದಷ್ಟು ಅಲ್ಲಲ್ಲಿಗೇ ಸರಿ ಮಾಡ್ಕೊಂಡು ಮುಂದುವರೀಬೇಕು, ಅಷ್ಟೇ' ರಾಘವ ಎಷ್ಟೋ ಬಾರಿ ಗೆಳೆಯನಿಗೆ ತಿಳಿವಳಿಕೆಯ ಮಾತು ಹೇಳಿದ್ದ, ಭಾರೀ ಬುದ್ಧಿವಂತನಂತೆ. ಆದರೆ ಸ್ವಭಾವಕ್ಕೆ ಮದ್ದೆಲ್ಲಿ? ಇಂತಾ ವಿಶ್ವನಿಗೆ ಹೆದರುವವರ ಮೇಲೆ ಕಪ್ಪೆ ಎಸೆದಂತೆ ಲಘು ಹೃದಯಾಘಾತ ಆಯ್ತು. ತೀರಾ ದೊಡ್ಡಮಟ್ಟದ ಹೊಡೆತ ಬೀಳಲಿಲ್ಲ. ಒಂದು ಸ್ಟಂಟ್ ಹಾಕಿ ರಕ್ತನಾಳ ಸರಿಪಡಿಸುವಲ್ಲಿಗೆ ವಿಪತ್ತು ತಪ್ಪಿತು. ಆದರೆ ವಿಶ್ವ ಕಂಗಾಲಾಗಿಬಿಟ್ಟಿದ್ದ. ಎಷ್ಟು ಎಚ್ಚರವಹಿಸಿ ಬದುಕು ನಡೆಸುತ್ತಿದ್ದರೂ ಹೀಗೇಕಾಯ್ತು ಎನ್ನುವ ಕಳವಳ. ಇದು ಇಲ್ಲಿಗೇ ಸರಿಯಾಗುತ್ತದೆಯಾ? ಎನ್ನುವ ಸಂಶಯ. ವಂಶವಾಹಿಯಲ್ಲೇ ಹೀಗೊಂದು ತೊಡಕು ಇದೆಯೇ ಎನ್ನುವ ಅನುಮಾನ.

'ಯಾಕಿಷ್ಟು ತಲೆ ಕೆಡಿಸ್ಕೋತೀಯೋ? ಏನಾಗಿದೆ ಈಗ? ಮೊದಲಿನ ಹಾಗೆ ಆರಾಮಾಗಿರು. ದೇವ್ರಿದಾನೆ, ನೋಡ್ಕೋತಾನೆ...' ಅಂದರೆ ಅವನಿಗೆ ಕೆರಳುತ್ತಿತ್ತು.

'ದೇವ್ರಂತೆ ದೇವ್ರು. ಅವನ ಹೆಸರೆತ್ಬೇಡ ನನ್ನ ಮುಂದೆ. ದೇವ್ರು ಇದ್ದಿದ್ರೆ ನಮ್ಮ ಸಂಸಾರದಲ್ಲಿ ಹೀಗ್ಯಾಕಾಗ್ತಿತ್ತು? ಇನ್ನೇನೂ ಬೇಡ, ಆರೋಗ್ಯ ಒಂದು ಚೆನ್ನಾಗಿತ್ತು ಅಂದ್ರೆ ಹೇಗೋ ನಿಭಾಯಿಸ್ತಿದ್ದೆ'.

'ಹುಚ್ಚ, ನಿನ್ನ ಆರೋಗ್ಯಕ್ಕೆ ಏನೂ ಆಗಿಲ್ಲ. ಸಣ್ಣದೊಂದು ರಿಪೇರಿ ಅಷ್ಟೇ. ಮನುಷ್ಯದೇಹಾನೂ ಒಂದು ಯಂತ್ರ ಅಲ್ವೇನೋ? ಆಗಾಗ ಕೆಡ್ತಿರುತ್ತೆ. ರಿಪೇರಿ ಮಾಡಿಸ್ಕೊಳ್ಳುತ್ತೆ. ಮತ್ತೆ ಕೆಲಸ ಶುರು ಮಾಡುತ್ತೆ' ಲಘು ಹಾಸ್ಯದ ಮಾತುಗಳು ಅವನ ತಲೆಗೆ ಹೊಕ್ಕುತ್ತಿರಲಿಲ್ಲ.